# ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್  233/2023

ಪಿ ಡಬ್ಲ್ಯೂ -1

**ದಿನಾಂಕ 17-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು  ಮಾನ್ಯ ಎ.ಜಿ.ಪಿ ಪ್ರತಿವಾದಿ ಪರ ವಕೀಲರುಃ**

ಆಶಾ ಮತ್ತು ಗೌರಮ್ಮ ನಾನೇ ನನಗೆ ಎರಡು ಹೆಸರುಗಳಿಂದ ಕರೆಯುತ್ತಾರೆ. ನಮಗೆ ಸರ್ಕಾರ ವತಿಯಿಂದ ಆಶ್ರಯ ಯೋಜನೆಯಡಿ ಹಕ್ಕು ಪತ್ರವು ಯಾವಾಗ ನಮಗೆ ವಿತರಿಸಲಾರಿದೆ ಆದರೆ ದಿನಾಂಕ ನನಗೆ ಗೊತ್ತಿಲ್ಲ ಆದರೆ 28 ವರ್ಷಗಳಾಗಿವೆ.  ನಾನು ತಾಲ್ಲೂಕು ಕಚೇರಿಗೆ ಯಾವಾಗ ಹೋಗಿರುತ್ತೇನೆ ಮತ್ತು ಯಾವ ದಿನಾಂಕದಂದು ಹಿಂಬರಹವನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**2**. ನಾನು ಸಲ್ಲಿಸಿರುವ ದಾಖಲೆಗಳಲ್ಲಿ ನನ್ನ ಹೆಸರು ಗೌರಮ್ಮ ಮನೆ ಪತ್ರದಲ್ಲಿ ನಮೂದಗಿದ್ದು, ಆಹಾರ ಪಡಿತರ ಚೀಟಿ, ಮತದಾರರ ಚೀಟಿ ಮತ್ತು ಆಧಾರ ಕಾರ್ಡನಲ್ಲಿ ನನ್ನ ಹೆಸರು ಆಶಾ ಎಂದು ನಮೂದಾಗಿರುತ್ತದೆ. ನನ್ನ ಹೆಸರು ಆಶಾ ಆಗಿದ್ದರೂ ಸಹ ಗೌರಮ್ಮ ಎಂದು  ಸುಳ್ಳು ಹೇಳಿ ಸುಳ್ಳು ದಾವೆಯನ್ನು ಸಲ್ಲಿಸಿ ಅಕ್ರಮವಾಗಿ ಸರ್ಕಾರಿ ಸವಲತ್ತುಗಳನ್ನು ಪಡೆಯಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ ಅವರ  ಯಾವುದೇ ತಪ್ಪು ಹೊಣೆಗಾರಿಕೆ ಮತ್ತು ಭಾದ್ಯತೆ ಇರದೆ ಇದ್ದರೂ ಸಹ ಈ ದಾವೆಯನ್ನು ಅವರ ವಿರುದ್ಧ ತಂದಿರುತ್ತೇನೆ ಎಂದರೆ ಸರಿಯಲ್ಲ.  ಭೂ ಕಂದಾಯ  ಅಧಿನಿಯಮ ಕಲಂ 135 ರಂತೆ ಕಂದಾಯ ದಾಖಲೆಗಳಲ್ಲಿ ತಿದ್ದುಪಡಿ ಮಾಡುವಂತೆ ಅಥವಾ ನಮೂದು ಮಾಡುವಂತೆ ನಿರ್ದೇಶಿಸುವ ನ್ಯಾಯಾಧಿಕಾರ ವ್ಯಾಪ್ತಿ ಸಿವಿಲ್ ನ್ಯಾಯಾಲಯಗಳಿಗೆ ಇರುವುದಿಲ್ಲ ಎಂದರೆ ಸರಿಯಲ್ಲ.  ವಾದಿಯು ಭೂ ಕಂದಾದು ಅಧಿನಿಯಮದಡಿಯಲ್ಲಿ ಸಂಬಂಧಿಸಿದ ಪ್ರಾಧೀಕಾರಕ್ಕೆ ಅರ್ಜಿ ಸಲ್ಲಿಸದೇ ನೇರವಾಗಿ ದಾವೆ ಸಲ್ಲಿಸಿರುವುದು ಕಾನೂನುಬದ್ದವಾಗಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ  ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ  ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ